2. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

3. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಯಮಿತ ಮತ್ತು

4. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಂದ

2013–14ರಲ್ಲಿ ವಿರತಿಸಿರುವ ನೀರಾವರಿ ಪಂಪ್‌ಸೆಟ್‌ಗಳ ವಿವರ ಮತ್ತು 2014–15ನೇ ಸಾಲಿಗೆ ಹೊಂದಿರುವ ಗುರಿಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

	2013–14ನೇ ಸಾಲಿನಲ್ಲಿ ಪಂಪ್ ಸೆಟ್ ವಿತರಿಸಿದ ರೈತರ ಸಂಖ್ಯೆ	**2014–15ನೇ ಸಾಲಿನಲ್ಲಿ ಪಂಪ್‌ಸೆಟ್ ವಿತರಿಸಲು ಹೊಂದಿರುವ ಗುರಿ**
ಪರಿಶಿಷ್ಟ ಜಾತಿ	3150	14100
ಪರಿಶಿಷ್ಟ ಪಂಗಡ	2187	4667
ಹಿಂದುಳಿದ ವರ್ಗ	1814	3633
ಅಲ್ಪಸಂಖ್ಯಾತರಿಗೆ	80	1800

ಊ) ಈ ಯೋಜನೆಯ ಸರ್ಕಾರದ ನಿರಂತರ ಯೋಜನೆಗಳಾಗಿದ್ದು, ಇದ ರಿಂದ ಸರ್ಕಾರಕ್ಕೆ ಹೆಚ್ಚುವರಿ ಆರ್ಥಿಕ ಹೊರೆ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನಸಭೆ

3068; ಡಾ. ಸುಧಾಕರ್. ಕೆ. (ಚಿಕ್ಕಬಳ್ಳಾಪುರ)

ಅ) ರೈತರಿಗೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡಲು ಎಷ್ಟು ಮೊತ್ತವನ್ನು ಸಹಾಯಧನ ರೂಪದಲ್ಲಿ

ನೀಡಲಾಗುತ್ತಿದೆ; ಕಳೆದ ಮೂರು ವರ್ಷಗಳಲ್ಲಿ ನೀಡಿದ ವಿದ್ಯುತ್‌ನ ವರ್ಷವಾರು ವಿವರ ನೀಡುವುದು;

ಆ) ಎಷ್ಟು ರೈತರಿಗೆ ಈ ಸಾಲ ಸೌಲಭ್ಯ ಸಿಗುತ್ತಿದೆ; ಇದರ ಆಯ್ಕೆ ಮಾನದಂಡ ಏನು;

ಇ) ಆರ್ಥಿಕ ಸ್ಥಿತಿವಂತರೂ ಕೆಲವೆಡೆ ಈ ಸೌಲಭ್ಯ ಪಡೆದಿದ್ದಾರೆ ಎನ್ನುವ ಆರೋಪ ಇದೆ. ಸರ್ಕಾರಕ್ಕೆ ಈ ಕುರಿತು ಯಾವುರಾದರೂ ದೂರು ಬಂದಿದೆಯೇ; ಬಂದಿದ್ದರೆ ವಿಚಾರಣೆ ನಡೆದಿದೆಯೇ; ಯಾರನ್ನಾದರೂ ಶಿಕ್ಷೆಗೆ ಒಳಪಡಿಸಲಾಗಿದೆಯೇ;

ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ರೈತರೂ ಸೇರಿದಂತೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ಸರಬರಾಜಿಗಾಗಿ ಸರಕಾರದಿಂದ ನೀಡಲಾದ ಸಹಾಯಧನ ಹಾಗೂ ಬಳಕೆಯಾದ ವಿದ್ಯುತ್‌ನ ಪ್ರಮಾಣದ ವಿವರಗಳು ಕೆಳಕಂಡಂತಿವೆ.

ವರ್ಷ	ಸರ್ಕಾರದಿಂದ ನೀಡಲಾದ ಸಹಾಯಧನ (ರೂ. ಕೋಟಿಗಳಲ್ಲಿ)	ಬಳಕೆಯಾದ ವಿದ್ಯುತ್ (ದಶಲಕ್ಷ ಯೂನಿಟ್‌ಗಳಲ್ಲಿ)
2011–12	166.07	310.65
2012–13	141.05	326.34
2013–14	124.42	344.68

ಆ) ಕಳೆದ ಮೂರು ವರ್ಷಗಳಲ್ಲಿ ರೈತರೂ ಸೇರಿದಂತೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿದೆ.

ವರ್ಷ	ರೈತರೂ ಸೇರಿದಂತೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಸಂಖ್ಯೆ
2011–12	22,91,447
2012–13	24,28,078
2013–14	24,17,088

- ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಯೋಜನೆಯ ಫಲಾನುಭವಿಗಳನ್ನು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾ ಅಧಿಕಾರಿಗಳು ಆಯ್ಕೆ ಮಾಡಿ ಫಲಾನುಭವಿಗಳ ಪಟ್ಟಿಯನ್ನು ಮುಂದಿನ ಕ್ರಮಕ್ಕಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಲ್ಲಿಸುತ್ತಾರೆ.
- ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳು ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ಅರ್ಹರಿರುತ್ತಾರೆ.
- ಫಲಾನುಭವಿಗಳ ಪಟ್ಟಿಯ ಪ್ರಕಾರ ಸ್ಥಳ ಪರಿಶೀಲಿಸಿ, ಹಾಲಿ ಇರುವ ಎಲ್.ಟಿ. ವಿದ್ಯುತ್ ಮಾರ್ಗದಿಂದ ಸೇವಾ ಮಾರ್ಗವನ್ನು ವಿಸ್ತರಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಆರ್ಥಿಕ ಸ್ಥಿತಿವಂತರೂ ಕೆಲವೆಡೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ದೂರುಗಳು ಬಂದಿರುವುದಿಲ್ಲ.

ಡಾ: ಸುಧಾಕರ್ ಕೆ. (ಚಿಕ್ಕಬಳ್ಳಾಪೂರ): ಮಾನ್ಯ ಅಧ್ಯಕ್ಷರೆ, ಹೊಸದಾಗಿ ರೈತರಿಗೆ ಪಂಪ್‌ಸೆಟ್‌ಗಳ ಸರ್ವಿಸ್ ಮಾಡುವ ವಿಚಾರವಾಗಿ ಸರ್ಕಾರ ಹೊಸದಾಗಿ ಒಂದು ಸುತ್ತೋಲೆ ಹೊರಡಿಸಿದೆ. ಅದರ ಪ್ರಕಾರ 10 HP ಒಂದು HP ಸರ್ವಿಸ್‌ಗೆ ರೂ.10,000 ನಿಗದಿಪಡಿಸಿದೆ. ನಂತರ ರೈತರು ಕೊಡಬೇಕೆಂದು

ಹೇಳಿದೆ. ಹಾಗಾಗಿ ಆ ಒಂದು ಸುತ್ತೋಲೆಯನ್ನು ಹಿಂದಕ್ಕೆ ಪಡೆಯಬೇಕೆಂಬ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್: ಏನು ಮಾಡಬೇಕು ಹೇಳಿ.

ಡಾ: ಸುಧಾಕರ್: 10 ಹೆಚ್.ಪಿ.ಯವರೆಗೆ ಒಂದು ಲಕ್ಷ ರೂ.ಗಳವರೆಗೆ ಸರ್ಕಾರ ಭರಿಸುತ್ತಿದೆ. ಆದರೆ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಈ ಜಿಲ್ಲೆಗಳಲ್ಲಿ ಇವತ್ತು ಕನಿಷ್ಠ 20 ರಿಂದ 25 ಹೆಚ್.ಪಿ. ಗಳ ಪಂಪ್, ಮೋಟಾರ್ ಹಾಕುವಂತಹ ವ್ಯವಸ್ಥೆ ಎಲ್ಲಾ ಕಡೆಯೂ ಇದೆ. ಹಾಗಾಗಿ ಇವತ್ತು ಒಂದೂವರೆ ಲಕ್ಷ ರೂ.ಗಳಷ್ಟು ಹಣ ರೈತರು ಭರಿಸುವಂತಹ ಕೆಲಸ ಆಗಿದೆ. ಅವರಿಗೆ ಭರಿಸುವುದಕ್ಕೆ ಶಕ್ತಿ ಇಲ್ಲ. ಹಾಗಾಗಿ ಸರ್ಕಾರವೇ ಇದನ್ನು ಭರಿಸಬೇಕು. 10 ಹೆಚ್.ಪಿ.ಗೆ ನೀವೇನು ನಿಯಮ ಅನುಸರಿಸುತ್ತಿದ್ದೀರಿ ಅದನ್ನೇ 25 ಹೆಚ್.ಪಿ.ಯವರೆಗೂ ಅನುಸರಿಸಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಬಡ ರೈತರಿಗೆ ಎಂದು 10 ಹೆಚ್.ಪಿ. ವರೆಗೆ ಸರ್ಕಾರ ಉಚಿತವಾಗಿ ಸಬ್ಸಿಡಿ ಕೊಡುತ್ತಿದೆ, 15,20,25 ಹೆಚ್.ಪಿ. ವರೆಗೆ ಹೋಗುತ್ತಿದ್ದಾರೆ. River bed ನಲ್ಲಿ 250 ಹೆಚ್.ಪಿ. ವರೆಗೆ ಹೋಗುತ್ತಿದ್ದಾರೆ. ಸರ್ಕಾರ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅಂದಾಜು 6,200 ಕೋಟಿ ರೈತರಿಗೆ ಕೊಡುವುದು ಎಂದು ಲೆಕ್ಕಾಚಾರ ಹಾಕಿದ್ದೆವು. ಈಗ ಅದು ನೋಡಿದರೆ 8,000 ರಿಂದ 7900 ಕೋಟಿ ರೂ.ಗಳವರೆಗೆ ಹೋಗುತ್ತಿದ್ದೆ. ನಮ್ಮ ಬಜೆಟ್ ಡಿಮ್ಯಾಂಡ್ ಬಗ್ಗೆ ಏನು ಚರ್ಚೆ ನಡೆಯುತ್ತಿದೆ, ಈ ಡಿಮ್ಯಾಂಡ್ ಸಂದರ್ಭದಲ್ಲಿ ರೈತರಿಗೆ ವ್ಯಾಪಕವಾದ ಪ್ಯಾಕೇಜ್ ಕೊಡುವುದಕ್ಕೆ ಆಲೋಚನೆ ಮಾಡಿದ್ದೇವೆ. ಯಾರು progressive farmrs ಇದ್ದಾರೆ, ಯಾರು ಹಣ ಕಟ್ಟುವುದಕ್ಕೆ ಮುಂದೆ ಬರುತ್ತಾರೆ? ಅಂತಹವರಿಗೆ quality current ಕೊಡಬೇಕೆಂದು ಬಹಳ ಜನರ ರೈತರು ಮುಂದೆ ಬಂದಿದ್ದಾರೆ, ಈ ಹಿನ್ನೆಲೆಯಲ್ಲಿ ನಾನು ಉತ್ತರ ಕೊಡುವಾಗ ಸಂಪೂರ್ಣವಾದ ಮಾಹಿತಿ ಕೊಡುತ್ತೇನೆ. ಆಗ ತಮಗೆ ಇನ್ನೂ ಸಮಾಧಾನವಾಗಲಿಲ್ಲವೆಂದರೆ ತಾವು ದಯ

ವಿಟ್ಟು ಕೇಳಿ, ತಮ್ಮ ಕಳಕಳಿ ಬಹಳ ಅರ್ಥಪೂರ್ಣವಾಗಿದೆ. ನಿಮ್ಮ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ತೀರ್ಮಾನ ಮಾಡುತ್ತದೆ.

ಡಾ: ಸುಧಾಕರ್ ಕೆ. ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಇದೆ, ಕಡಿಮೆ ದರದಲ್ಲಿ ಸಿಗುತ್ತವೆ ಎಂದು sub-standard pump, motor ಗಳನ್ನು ರೈತರು ಅಳವಡಿಸುತ್ತಿದ್ದಾರೆ.

ಅಧ್ಯಕ್ಷರು: ನೀವು SC/ST ಪ್ರಶ್ನೆ ಕೇಳಿದ್ದೀರಿ.

ಡಾ: ಸುಧಾಕರ್ ಕೆ.: ಈ ಪ್ರಶ್ನೆಯೂ ಇದೆ.

ಅಧ್ಯಕ್ಷರು: How many pump sets have been distributed to farmers ಎಂದಿದೆ.

ಡಾ. ಸುಧಾಕರ್ ಕೆ.: ಕಳಪೆ ಗುಣ ಮಟ್ಟದ ಪಂಪ್ ಮೋಟರ್‌ಗಳನ್ನು ಅಳವಿಡಿಸುವುದರಿಂದ ಹೆಚ್ಚಿನ ವಿದ್ಯುತ್ ಅಳವಡಿಕೆ ಜಾಸ್ತಿ ಆಗಿದೆ.

ಅಧ್ಯಕ್ಷರು: ಅವರು ನಿಮಗೆ ಉತ್ತರ ಕೊಟ್ಟಿರುವುದು ದೇವರಾಜ ಅರಸ್ Minority Development Corportation ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಮೇಲಿನ ಪ್ರಶ್ನೆ ಆ ರೀತಿ ಇರುವುದರಿಂದ ಅದಕ್ಕೆ confine ಮಾಡಿ ಉತ್ತರ ಕೊಟ್ಟಿದ್ದಾರೆ. ನೀವು ಜನರಲ್ ಆಗಿ ಕೇಳುತ್ತೀರಿ. ಅದಕ್ಕೆ ಉತ್ತರ ಕೊಡುತ್ತಾರೆ ಬಿಡಿ.

ಡಾ: ಸುಧಾಕರ ಕೆ.: Sub-standard pump set ಗಳನ್ನು ಹಾಕುತ್ತಿರುವುದರಿಂದ ಹೆಚ್ಚಿನ ವಿದ್ಯುತ್ ಅಳವಡಿಕೆ ಜಾಸ್ತಿಯಾಗುತ್ತಿದೆ. ನೀವು ವಿದ್ಯುತ್ತನ್ನು ಸೇವ್ ಮಾಡಬೇಕೆಂದರೆ ಅವರಿಗೆ ಗುಣಮಟ್ಟದ ಪಂಪ್ ಸೆಟ್ ಗಳನ್ನು ಸರ್ಕಾರ ಕೊಡುವುದಕ್ಕೆ ಅವಕಾಶ ಇದೆಯೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಡಿಮ್ಯಾಂಡ್ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತಾರೆ.

ಶ್ರೀ ಡಿ. ಕೆ. ಶಿವಕುಮಾರ್: Minority Development Corportation, SC/ST Development Corporation ಅವರು ಇದನ್ನೆಲ್ಲಾ ಮಾಡುವಂಥದ್ದು, ತಮ್ಮದೇನಾದರೂ ವ್ಯಾಪಕವಾದ ಸಲಹೆ ಇದ್ದರೆ ದಯವಿಟ್ಟು writing ನಲ್ಲಿ ಕೊಡಿ, we will examine this.

ಅಧ್ಯಕ್ಷರು: ವಿನಯ ಕುಲಕರ್ಣಿ ಇಲ್ಲ, ವಾಸು ಇಲ್ಲ, ಮಂಜುನಾಥಗೌಡ ಇಲ್ಲ, ಹ್ಯಾರಿಸ್ ಇಲ್ಲ, ವಡ್ನಾಳ ರಾಜಣ್ಣ.

ಚನ್ನಗಿರಿಯ ಪಟ್ಟಣ ಪಂಚಾಯ್ತಿಗಳನ್ನು ಮೇಲ್ದರ್ಜೆಗೇರಿಸುವುದು:

223 (2866); ಶ್ರೀ ವಡ್ನಾಳ ರಾಜಣ್ಣ (ಚನ್ನಗಿರಿ)

ಅ) ಚನ್ನಗಿರಿಯ ಪಟ್ಟಣ ಪಂಚಾಯ್ತಿಯನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಇದೆ.

ಆ) 2011ರ ಜನಗಣತಿಯನ್ವಯ ಚನ್ನಗಿರಿ ಪಟ್ಟಣ ಪಂಚಾಯ್ತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಅರ್ಹವಿದ್ದು ಅದರಂತೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ 3 ಹಾಗೂ 355 (ಇ) ರನ್ವಯ ಕ್ರಮ ಜರುಗಿಸಲಾಗುತ್ತಿದೆ.

ಶ್ರೀ ವಡ್ನಾಳ್ ರಾಜಣ್ಣ: ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಚನ್ನಗಿರಿಯ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು